**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹರಿಹರ**

ಓ.ಎಸ್.ನಂ.66/2021

ದಿನಾಂಕ 01/04/2023 ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ಪ್ರತಿವಾದಿ ಪರ ಶ್ರೀ ಜೆ.ಎನ್.ವಿ., ವಕೀಲರಿಂದ

ಮನ್ನಾ ಕೃಷ್ಣಮೂರ್ತಿ ಜೀವಂತ ಇರುವ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ವಾದ ಪತ್ರದ ಖಂಡಿಕೆ-3 ರಲ್ಲಿ ಹೇಳಿದಂತೆ ಮನ್ನಾ ಕೃಷ್ಣಮೂರ್ತಿಯವರು ಪ್ರತಿವಾದಿಯ ತಂದೆ ಜಸ್ತಿ ವೆಂಕಟೇಶ್ವರ ರಾವ್ ರವರಿಂದ 1 ಎಕರೆ 20 ಗುಂಟೆ ಜಮೀನನ್ನು ಮಾರಾಟ ಮಾಡಿದ ಬಗ್ಗೆ ಕ್ರಯ ಪತ್ರವನ್ನು ನೋಡಿರುವುದಿಲ್ಲ. ದಾವೆ ಹೂಡುವುದಕ್ಕಿಂತ ಮುಂಚೆ ಸದರಿ ಕ್ರಯ ಪತ್ರವನ್ನು ತೆಗೆಸಿ ನೋಡಲು ಪ್ರಯತ್ನಿಸಿರುವುದಿಲ್ಲ . ಸದರಿ 1 ಎಕರೆ 20 ಗುಂಟೆ ಜಮೀನಿನ ಚಕ್ಕುಬಂದಿ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ಪ್ರತಿವಾದಿ ಸಲ್ಲಿಸಿದ ತಕರಾರಿನ ಬಗ್ಗೆ ತಿಳಿದುಕೊಂಡಿರುತ್ತೇನೆ. ಅವರು ತಕರಾರು ಸಲ್ಲಿಸಿದ ನಂತರ ಸದರಿ 1 ಎಕರೆ 20 ಗುಂಟೆ ಜಮೀನಿಗೆ ಸಂಬಂಧಿಸಿದ ಕ್ರಯ ಪತ್ರವನ್ನು ನಾನು ತೆಗೆಸಲು ಪ್ರಯತ್ನಿಸಿರುವುದಿಲ್ಲ . ಸದರಿ ಜಮೀನಿನ ಪೂರ್ವ ದಿಕ್ಕಿಗೆ ಎಕ್ಕೆಗೊಂದಿ ನಿಂಗಪ್ಪನ ಜಮೀನು ಇರುತ್ತದೆ ಎಂದರೆ ಸರಿ. ಸದರಿ ಎಕ್ಕೆಗೊಂದಿ ನಿಂಗಪ್ಪ ಎಂದರೆ ನನ್ನ ತಂದೆ. ಸದರಿ ಜಮೀನಿನ ಪಶ್ಚಿಮ ದಿಕ್ಕಿಗೆ ಬಸವನಗೌಡ ರವರ ಜಮೀನು ಇರುತ್ತದೆ ಎಂದರೆ ಇರಬಹುದು. ಉತ್ತರ ದಿಕ್ಕಿಗೆ ದೇವರಬೆಳೆಕೆರೆ ಚಾನಲ್ ಇರುತ್ತದೆ ಎಂದರೆ ಇರಬಹುದು, ನನಗೆ ಗೊತ್ತಿಲ್ಲ. ದಕ್ಷಿಣಕ್ಕೆ ಜಸ್ತಿ ಪ್ರಣಯಮೂರ್ತಿ ರವರ ಜಮೀನು ಎಂದರೆ ಇರಬಹುದು, ನನಗೆ ಗೊತ್ತಿಲ್ಲ. ಸದರಿ 1 ಎಕರೆ 20 ಗುಂಟೆ ಜಮೀನನ್ನು ಮನ್ನಾ ಕೃಷ್ಣಮೂರ್ತಿಯವರು ಜಸ್ತಿ ವೆಂಕಟೇಶ್ವರ ರಾವ್ ರವರಿಗೆ ಮಾರಾಟ ಮಾಡಿದ ಬಗ್ಗೆ ಯಾವ ಆಧಾರದ ಮೇಲೆ ವಾದ ಪತ್ರದಲ್ಲಿ ಬರೆಸಿರುತ್ತೀರಿ ಎನ್ನುವ ಪ್ರಶ್ನೆಗೆ ಸಾಕ್ಷಿಯು ಸನ್ 1992 ರಲ್ಲಿ ಪ್ರತಿವಾದಿಯರು ಜಮೀನನ್ನು ಪೋಡು ಮಾಡಿಸಿದ್ದು , ಆವಾಗ ನನಗೆ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ಪೋಡಿ ದಾಖಲೆಯಲ್ಲಿ ಯಾರು, ಯಾರಿಗೆ, ಎಷ್ಟು ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂಬ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಸದರಿ 1 ಎಕರೆ 20 ಗುಂಟೆ ಜಮೀನನ್ನು ಮನ್ನಾ ಕೃಷ್ಣಮೂರ್ತಿಯವರು ಜಸ್ತಿ ವೆಂಕಟೇಶ್ವರ ರಾವ್ ರವರಿಗೆ ಮಾರಾಟ ಮಾಡುವುದಕ್ಕಿಂತ ಮುಂಚೆ ಚಾನಲ್ ಆಗಿತ್ತು ಎಂದರೆ ಸರಿ.

ನನ್ನ ವಾದ ಪತ್ರದ ಖಂಡಿಕೆ -3 ರಲ್ಲಿ ಹೇಳಿದ ಗೆಜೆಟ್ ನೋಟಿಫಿಕೇಶನ್ ಅನ್ನು ನ್ಯಾಯಾಲಯದಲ್ಲಿ ಈ ಪ್ರಕರಣದಲ್ಲಿ ಹಾಜರು ಪಡಿಸಿರುವುದಿಲ್ಲ. ಸದರಿ ಗೆಜೆಟ್ ನೋಟಿಫಿಕೇಶನ್ ನಲ್ಲಿ ಭೂ ಸ್ವಾಧೀನ ಪಡಿಸಿಕೊಳ್ಳುವಂತಹ ಜಮೀನಿನ ವಿಸ್ತೀರ್ಣ, ಚಕ್ಕುಬಂದಿಯನ್ನು ನಮೂದಿಸಿರುತ್ತಾರೆ ಎಂದರೆ ಸಾಕ್ಷಿಯು ಖಾತೆದಾರರ ಹೆಸರು, ಒಟ್ಟು ವಿಸ್ತೀರ್ಣ ಹಾಗೂ ಸ್ವಾಧೀನ ಪಡಿಸಿಕೊಳ್ಳಬೇಕಾದ ಜಮೀನು ಮಾತ್ರ ನಮೂದಿಸಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ದಾವೆಯಲ್ಲಿ ಹೇಳಿದಂತೆ 1 ಎಕರೆ 20 ಗುಂಟೆ ಜಮೀನು ಭೂ ಸ್ವಾಧೀನವಾದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಮನ್ನಾ ಕೃಷ್ಣಮೂರ್ತಿಯವರಿಂದ ಸರ್ಕಾರದ ಜಮೀನನ್ನು ಸ್ವಾಧೀನಪಡಿಸಿಕೊಂಡ ನಂತರ ಕಾಲುವೆಯನ್ನು ನಿರ್ಮಾಣ ಮಾಡಿರುತ್ತಾರೆ ಎಂದರೆ ಸರಿ. ಸದರಿ ಕಾಲುವೆಯನ್ನು ನಾನು ನೋಡಿರುತ್ತೇನೆ. ಅದು 570

ಅಡಿ ಉದ್ದವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆದರೆ 1 ಎಕರೆ 20 ಗುಂಟೆ ಜಮೀನು ಸ್ವಾಧೀನ ಗೊಂಡ ಬಗ್ಗೆ ಮಾತ್ರ ನನಗೆ ಗೊತ್ತಿರುತ್ತದೆ. ಸದರಿ ಚಾನಲ್ ನ ಅಗಲ 21 ಅಡಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಚಾನಲ್ ನ ದಕ್ಷಿಣ ದಿಕ್ಕಿಗೆ 40 ಅಡಿ ಅಗಲದ ಬದು ಇರುತ್ತದೆ ಎಂದರೆ ಸರಿಯಲ್ಲ. ಇವತ್ತಿಗೂ ಸಹ ನೀರಾವರಿ ಇಲಾಖೆಯವರು ನಿರ್ಮಾಣ ಮಾಡಿದ 40 ಅಡಿ ಅಗಲದ ಬದು ಅಸ್ತಿತ್ವದಲ್ಲಿರುತ್ತದೆ ಎಂದರೆ ಸರಿಯಲ್ಲ.

ಪ್ರತಿವಾದಿಯ ತಂದೆ 1 ಎಕರೆ 20 ಗುಂಟೆ ಜಮೀನನ್ನು ಖರೀದಿ ಮಾಡುವ ಕಾಲಕ್ಕೆ ನಾನು ಜಮೀನಿಗೆ ಭೇಟಿ ನೀಡಿರುವುದಿಲ್ಲ. ಮನ್ನಾ ಕೃಷ್ಣಮೂರ್ತಿಯವರು ತಮ್ಮ ಜಮೀನಿನಲ್ಲಿ ನಿರ್ಮಾಣವಾದ ಚಾನಲ್ ನ ದಕ್ಷಿಣ ದಿಕ್ಕಿಗೆ ಇರುವ 40 ಅಡಿ ಅಗಲದ ಬದುವಿನ ನಂತರ ಬರುವ 1 ಎಕರೆ 20 ಗುಂಟೆ ಜಮೀನನ್ನು ಪ್ರತಿವಾದಿ ತಂದೆಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಚಾನಲ್ ನ ಉತ್ತರ ದಿಕ್ಕಿಗೆ ರಸ್ತೆ ಇರುತ್ತದೆ. ಸದರಿ ಚಾನಲ್ ರಸ್ತೆ ಎಷ್ಟು ಅಗಲ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಚಾನಲ್ ರಸ್ತೆಯ ಉತ್ತರ ದಿಕ್ಕಿಗೆ ಬದು ಇರುತ್ತದೆ ಎಂದರೆ ಸರಿಯಲ್ಲ. ಚಾನಲ್, ರಸ್ತೆ ಹಾಗೂ ಬದುವಿನ ಬಗ್ಗೆ ನೀರಾವರಿ ಇಲಾಖೆಯಿಂದ ನಾನು ಯಾವುದೇ ದಾಖಲೆಯನ್ನು ತೆಗೆಸಿರುವುದಿಲ್ಲ. ಸದರಿ ದಾಖಲೆಗಳನ್ನು ತೆಗೆಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಮನ್ನಾ ಕೃಷ್ಣಮೂರ್ತಿಯವರ ಜಮೀನಿನಲ್ಲಿ ನೀರಾವರಿ ಇಲಾಖೆಯವರು 28,785 ಚದರ್ ಅಡಿ ಜಮೀನನ್ನು ಚಾನಲ್, ರಸ್ತೆ ಹಾಗೂ ಬದುವಿಗಾಗಿ ಸ್ವಾಧೀನಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಮೀನನ್ನು ಭೂ ಸ್ವಾಧೀನ ಪಡಿಸಿಕೊಳ್ಳುವ ಸಮಯದಲ್ಲಿ ನಮ್ಮ ತಂದೆ ಬದುಕಿದ್ದರು.

ನಾನು ಗೆಜೆಟ್ ನೋಟಿಫಿಕೇಶನ್ ನೋಡಿರುತ್ತೇನೆ. ಸದರಿ ಗೆಜೆಟ್ ನೋಟಿಫಿಕೇಶನ್ ನಲ್ಲಿ ಭೂ ಸ್ವಾಧೀನವಾದ ಜಮೀನಿನ ಖಾತೆದಾರರು ನಿಂಗಪ್ಪ ಬಿನ್ ನಾಗಪ್ಪ ಎಕ್ಕೆ ಗೊಂದಿ ಎಂದು ತೋರಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಸ್ವತಃ ಹೇಳುವುದೇನೆಂರೆ ಸದರಿ ನಿಂಗಪ್ಪನ 1 ಎಕರೆ ಜಮೀನು ಹಾಗೂ ಮನ್ನಾ ಕೃಷ್ಣಮೂರ್ತಿಯವರ 1 ಎಕರೆ 25 ಗುಂಟೆ ಜಮೀನು ಭೂ ಸ್ವಾಧೀನವಾಗಿರುತ್ತದೆ ಎಂದು ನುಡಿಯುತ್ತಾರೆ. ಮನ್ನಾ ಕೃಷ್ಣ ಮೂರ್ತಿಯವರ ಸ್ವಾಧೀನಪಡಿಸಿಕೊಂಡ ಜಮೀನಿನ ಪೂರ್ವ, ಉತ್ತರ ಹಾಗೂ ದಕ್ಷಿಣ ದಿಕ್ಕಿಗೆ ಸರ್ವೆ ನಂಬರ್ 79 ರ ಉಳಿದ ಭಾಗ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಮನ್ನಾ ಕೃಷ್ಣ ಮೂರ್ತಿಯವರ ಸ್ವಾಧೀನಪಡಿಸಿಕೊಂಡ ಜಮೀನಿನ ಪಶ್ಚಿಮ ದಿಕ್ಕಿಗೆ ಬಸವನಗೌಡ ರವರ ಜಮೀನು ಇರುತ್ತದೆ ಎಂದರೆ ಸರಿ. ಸಾಕ್ಷಿಯು ಸ್ವತಃ ಹೇಳುವುದೇನೆಂದರೆ ಈಗ ಬಾನುವವ್ವಿ ಕುಬೇರ ಗೌಡ ರವರ ಜಮೀನು ಇರುತ್ತದೆ. ನಿಂಗಪ್ಪ ಎಕ್ಕೆಗೊಂದಿಯವರ ಸ್ವಾಧೀನಪಡಿಸಿಕೊಂಡ ಜಮೀನಿನ ಉತ್ತರ, ದಕ್ಷಿಣ ಹಾಗೂ ಪಶ್ಚಿಮ ದಿಕ್ಕಿಗೆ ಸರ್ವೆ ನಂಬರ್ 79 ರ ಜಮೀನು ಎಂದರೆ ಸರಿ. ಸದರಿ ಜಮೀನಿನ ಪೂರ್ವಕ್ಕೆ ಸರ್ವೆ ನಂಬರ್ 80 ರ ಜಮೀನು ಬರುತ್ತದೆ ಎಂದರೆ ಸರಿ. ಸದರಿ ಸರ್ವೆ ನಂಬರ್ 80 ರ ಜಮೀನು ನಂದೆಪ್ಪ ಬಿನ್ ಸಣ್ಣ ಬಸಪ್ಪ ರವರಿಗೆ ಸೇರಿದ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 80 ಕ್ಕೆ ಹಾಲಿ ಬಸವರಾಜ ಎಂಬುವವರು ಮಾಲೀಕರು ಇರುತ್ತಾರೆ. ಸರ್ವೆ ನಂಬರ್ 79 ಹಾಗೂ 80 ರ ಮಧ್ಯೆದಲ್ಲಿ ಬದು ಇರುತ್ತದೆ. ಸದರಿ ಬದು ಸುಮಾರು 3 ಅಡಿ ಅಗಲ ಹಾಗೂ 2 ಅಡಿ ಎತ್ತರ ಇರುತ್ತದೆ ಎಂದರೆ ಸಾಕ್ಷಿಯು 1 ಅಡಿ ಎತ್ತರ ಹಾಗೂ 1 ವರೆ ಅಡಿ ಅಗಲ ಇರುತ್ತದೆ ಎಂದು ನುಡಿಯುತ್ತಾರೆ.

ಬದುವಿನ ಪಶ್ಚಿಮ ದಿಕ್ಕಿಗೆ ಇರುವ ನಿಂಗಪ್ಪನ ಜಮೀನು ಭೂ ಸ್ವಾಧೀನಗೊಂಡಿರುತ್ತದೆ ಎಂದರೆ ಸರಿ.

ಸನ್ 2015 ರಲ್ಲಿ ಸರ್ವೆ ನಂಬರ್ 79 ರಲ್ಲಿ 5 ಗುಂಟೆ ಜಮೀನನ್ನು ಶಿವನಗೌಡ ಎಂಬುವವರಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಸದರಿ ಜಮೀನನ್ನು ಅವರು ನಮ್ಮಿಂದ ದಾರಿಗಾಗಿ ಖರೀದಿಸಿರುತ್ತಾರೆ. ಸದರಿ ಶಿವನಗೌಡ ರವರು ಸರ್ವೆ ನಂಬರ್ 74 ನೇದ್ದರ ಮಾಲಿಕರು ಎಂದರೆ ಸರಿ. ಸದರಿ ಜಮೀನಿಗೆ ಹೋಗಲು ಮೇಲೆ ಹೇಳಿದ 5 ಗುಂಟೆ ಜಮೀನನ್ನು ಖರೀದಿಸಿರುತ್ತಾರೆ ಎಂದರೆ ಸರಿ. ಸದರಿ 5 ಗುಂಟೆ ಜಮೀನನ್ನು ಖರೀದಿ ಮಾಡಿದ ನಂತರ ಬದು ಪಕ್ಕದಲ್ಲಿ ಅವರು ರಸ್ತೆಯನ್ನು ನಿರ್ಮಾಣ ಮಾಡಿರುತ್ತಾರೆ ಎಂದರೆ ಸರಿ. ರಸ್ತೆಯನ್ನು ನಿರ್ಮಾಣ ಮಾಡುವ ಕಾಲಕ್ಕೆ ಬದುವಿನ ಸ್ವಲ್ಪ ಭಾಗಗಳನ್ನು ಸೇರಿಸಿ ರಸ್ತೆ ನಿರ್ಮಾಣ ಮಾಡಿರುತ್ತಾರೆ ಎಂದರೆ ಸರಿ. ಸದರಿ ಶಿವನಗೌಡ ರವರು ಸರ್ವೆ ನಂಬರ್ 79 ರಲ್ಲಿ 5 ಗುಂಟೆ ಜಮೀನನ್ನು ಖರೀದಿ ಮಾಡಿದ ನಂತರ ಅದರ ಸರ್ವೆ ನಂಬರ್ 79/5 ಎಂದು ಪೋಡಾಗಿರುತ್ತದೆ ಎಂದರೆ ಸರಿ.

ಸರ್ವೆ ನಂಬರ್ 80 ರ ಜಮೀನಿನ ತುದಿಯಿಂದ ಪಶ್ಚಿಮ ದಿಕ್ಕಿನ ಕಡೆಗೆ ಸರ್ವೆ ನಂಬರ್ 79 ರಲ್ಲಿ ಭೂ ಸ್ವಾಧೀನ ಪ್ರಕ್ರಿಯೆಯಾಗಿರುತ್ತದೆ ಎಂದರೆ ಸರಿ . ಸದರಿ ಜಮೀನು 1 ಎಕರೆ 25 ಗುಂಟೆ ಸ್ವಾಧೀನಗೊಂಡಿರುತ್ತದೆ ಎಂದರೆ ಸಾಕ್ಷಿಯು ಒಟ್ಟು ನಮ್ಮ ಜಮೀನು ಸೇರಿಸಿ ಒಟ್ಟು 2 ಎಕರೆ 25 ಗುಂಟೆ ಜಮೀನು ಸ್ವಾಧೀನಗೊಂಡಿರುತ್ತದೆ ಎಂದು ನುಡಿಯುತ್ತಾರೆ. ಮನ್ನಾ ಕೃಷ್ಣಮೂರ್ತಿಯವರ ಜಮೀನಿನಲ್ಲಿ 1 ಎಕರೆ ಜಮೀನು ಸ್ವಾಧೀನಗೊಂಡಿರುತ್ತದೆ ಎಂದರೆ ಸಾಕ್ಷಿಯು 1 ಎಕರೆ 25 ಗುಂಟೆ ಜಮೀನು ಸ್ವಾಧೀನಗೊಂಡಿರುತ್ತದೆ ಎಂದು ನುಡಿಯುತ್ತಾರೆ.

ನನಗೆ ಈರಮ್ಮ ಎಂಬ ಹೆಸರಿನ ಸಹೋದರಿ ಇರುತ್ತಾಳೆ. ಸದರಿ ಈರಮ್ಮಳಿಗೆ ನನ್ನ ತಂದೆ 2 ಎಕರೆ ಜಮೀನನ್ನು ದಾನವಾಗಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನಾವು ದಾನವಾಗಿ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಈರಮ್ಮಳಿಗೆ ಕೊಟ್ಟ ಜಮೀನಿನ ಸರ್ವೆ ನಂಬರ್ 79/4 ಇರುತ್ತದೆ. ಸದರಿ ಸರ್ವೆ ನಂಬರ್ 79 ರಲ್ಲಿ ಶಿವನಗೌಡ ರವರಿಗೆ ಮಾರಾಟ ಮಾಡಿದ 5 ಗುಂಟೆ ಜಮೀನು ಹಾಗೂ ಈರಮ್ಮಳಿಗೆ ದಾನ ಮಾಡಿದ 2 ಎಕರೆ ಜಮೀನಿನ ಬಗ್ಗೆ ವಾದ ಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸರಿ.

ಒ ಎಸ್ ನಂಬರ್ 56/1993 ರಲ್ಲಿ ನಾನು 2 ನೇ ಪ್ರತಿವಾದಿ ಯಾಗಿದ್ದೆನು ಎಂದರೆ ಇರಬಹುದು. ಸದರಿ ದಾವೆಯಲ್ಲಿ ನಾನು ತಕರಾರನ್ನು ಸಹ ಸಲ್ಲಿಸಿದ್ದೆ ಎಂದರೆ ನನಗೆ ಈಗ ನೆನಪಿಲ್ಲ. ಈ ದಾವೆಯನ್ನು ಹಾಕುವುದಕ್ಕಿಂತ ಮುಂಚೆ ಸದರಿ ಒ ಎಸ್ ನಂಬರ್ 56/1993 ರಲ್ಲಿ ಸಲ್ಲಿಸಿದ ತಕರಾರಿನ ನಕಲನ್ನು ತೆಗೆಸಲು ಪ್ರಯತ್ನಿಸಿರುವುದಿಲ್ಲ. ಸದರಿ ದಾವೆಯಲ್ಲಿ ನಾನು ಏನು ತಕರಾರು ಸಲ್ಲಿಸಿದ್ದೆ ಎಂದು ನನಗೆ ಈಗ ನೆನಪಿಲ್ಲ.

ಹದ್ದುಬಸ್ತು ಮಾಡುವುದಕ್ಕಿಂತ ಮುಂಚೆ ಸರ್ವೆ ಇಲಾಖೆಯವರು ಅಕ್ಕ ಪಕ್ಕದ ಜಮೀನಿನವರಿಗೆ ನೋಟಿಸು ಕೊಟ್ಟಿದ್ದರು ಎಂಬ ಬಗ್ಗೆ ದಾಖಲೆ ಸಲ್ಲಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಸ್ವತಃ ಹೇಳುವುದೇನೆಂದರೆ ನೋಟಿಸು ಜಾರಿ ಮಾಡಿರುತ್ತಾರೆ. ಅಕ್ಕ ಪಕ್ಕದ ಜಮೀನಿನ ಮಾಲೀಕರಿಗೆ ನೋಟಿಸು ಕೊಟ್ಟಿರುತ್ತಾರೆ ಎಂಬ ಬಗ್ಗೆ ಸರ್ವೆ ಇಲಾಖೆಯಿಂದ ಸದರಿ ನೋಟಿಸ್ ಗಳ ಧೃಡಿಕೃತ ನಕಲನ್ನು ತೆಗೆಸಲು ಪ್ರಯತ್ನಿಸಿರುವುದಿಲ್ಲ.

ರಿ.ಸರ್ವೆ ನಂಬರ್ 79/ಪಿ ನೇದ್ದರಲ್ಲಿ ಖರಾಬು ವಜಾ ಹೋಗಿ 16 ಎಕರೆ 27 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ಸದರಿ 16 ಎಕರೆ 27 ಗುಂಟೆ ಜಮೀನಿನಲ್ಲಿ ನನ್ನ ತಂದೆ ಹಾಗೂ ನಾನು ಮಾರಾಟ ಮಾಡಿದ್ದು, ದಾನ ಕೊಟ್ಟಿದ್ದು ಹಾಗೂ ಭೂ ಸ್ವಾಧೀನಗೊಂಡಿದ್ದು ಎಲ್ಲ ವಜಾಗೊಂಡು 10 ಎಕರೆ 17 ಗುಂಟೆ ಜಮೀನು ಉಳಿದಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಜಮೀನಿನ ಹಕ್ಕು ಪತ್ರ ಹಾಜರುಪಡಿಸಿರುತ್ತೀರ ಎನ್ನುವ ಪ್ರಶ್ನೆಗೆ ಸಾಕ್ಷಿಯ ಪಹಣಿ, ಆಕಾರ್ ಬಂದ್ ಹಾಗೂ ಸ್ಕೆಚ್ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ . ಸರ್ವೆ ನಂಬರ್ 79/3 ನೇದ್ದರ ಪಹಣಿಯಲ್ಲಿ 4 ಎಕರೆ ಜಮೀನು ತೋರಿಸಿರುತ್ತಾರೆ ಎಂದರೆ ಸರಿ. ಸರ್ವೆ ನಂಬರ್ 79/3 ರಲ್ಲಿ ಹಿತಾಸಕ್ತಿಯುಳ್ಳ ಎಲ್ಲಾ ವ್ಯಕ್ತಿಗಳನ್ನು ಪಕ್ಷಗಾರರನ್ನಾಗಿ ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸಾಕ್ಷಿಯು ಅದರ ಅವಶ್ಯಕತೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹರಿಹರ